
ಅವಳೊಂದಿಗೇ ಇರುತ್ತಿದ್ದೆನಾಗಿ ನನಗೆ ಅವಳ ಮೇಲೆ ಹಾಗೊಂದು ಆಸೆಯೇ ಬಂದಿರಲಿಲ್ಲ. ಅವತ್ತು ಹಾಗೆಯೇ, ಚಂದ್ರಾ ಏನೋ ಕೆಲಸಕ್ಕಾಗಿ ಮನೆಯತ್ತ ಬಂದಿದ್ದಳು. ಅವೊತ್ತು ವಾರಿಜಳಿಗೆ ಹುಷಾರಿರಲಿಲ್ಲ. ಹಾಗಾಗಿಯೇ ಇರಬೇಕು, ಬಚ್ಚಲಿಗೆ ನೀರು ತುಂಬುವ ಕೆಲಸ ಚಂದ್ರಾಳಿಗೆ ಬಂದಿತ್ತು. ನಾನು ಹೊರಗೆ ಜಗುಲಿಯಲ್ಲಿ ಕುಳಿತು ಅವಳನ್ನೇ ಗಮನಿಸುತ್ತಿದ್ದೆ. ಅಂಗಳದ ಬಾವಿಯಿಂದ ಬಿಂದಿಗೆಯಲ್ಲಿ ನೀರು ಸೇದಿ ತರುತ್ತಿದ್ದ ಚಂದ್ರಾ ಮುಳುಗು ಸೂರ್ಯನ ಕೆಂಪಿನಲ್ಲಿ ಹೊಳೆಯುತ್ತ ಮತ್ತಷ್ಟು ಸುಂದರವಾಗಿ ಕಂಗೊಳಿಸುತ್ತಿದ್ದಳು. ಅಮ್ಮನೂ ತೋಟಕ್ಕೆ ಹೋಗಿದ್ದಳು. ಇಂಥ ಸಂದರ್ಭ ಮರಳಿ ಸಿಗಲುಂಟೆ? ನಾನು ಅಷ್ಟೊಂದು ತತ್ವರತೆಯಿಂದ ತೊಡಗಿಸಿಕೊಂಡದ್ದು ಅದೇ ಮೊದಲಿರಬೇಕು, ಓಡಿ ಹೋಗಿ ಬಚ್ಚಲಿನ ಬಾಗಿಲ ಸಂದಿಯಲಿ ಬೆಕ್ಕಿನಂತೆ ಅವಿತಿದ್ದೆ. ಬಂದೇ ಬಂದಳು ಚಂದ್ರ, ಸೊಂಟದಿಂದ ಬಿಂದಿಗೆ ಇಳುಕಿ ಹಂಡೆಗೆ ಸುರಿದಳೋ ಇಲ್ಲವೋ. ನಾನು ಹಿಂದಿನಿಂದ ಬಿಗಿಯಾಗಿ ಅವಳನ್ನು ಅಪ್ಪಿದೆ. ಚಂದ್ರಾ ಗಾಬರಿಯಿಂದ ಕೂಗಿಕೊಂಡಳು. 'ಚಂದ್ರಾ, ಚಂದ್ರ, ಇರು ನಾನು ನಾನು' ನಾನು ಪಿಸುಗುಟ್ಟುತ್ತ ಅವಳ ಕಿವಿಯನ್ನು ಸಮೀಪಿಸಿದೆ. ಒಳಗೆ ನಸುಗತ್ತಲು. ಉರಿಯುತ್ತಿರುವ ಸೌದೆ ಒಲೆ, ಕೈಯೊಳಗೆ ಹೊಳೆವ ವಜ್ರದಂತ ಚೆಲುವ ರಾಶಿ. ನಾನು ಗಲಿಬಿಲಿಗೊಂಡಿದ್ದೆ. ಚಂದ್ರ ನನ್ನನ್ನು ಬಲವಿಟ್ಟು ನೂಕುತ್ತಿದ್ದಳು. ಅವಳ ಬಿಸಿಯುಸಿರು. ಮುಡಿದಿದ್ದ ಸಂಪಿಗೆ ಹೂವಿನ ಘಮಲು, ದಾವಣಿಯಂಚಿಂದ ಕೈಗೆ ತಗುಲುತ್ತಿದ್ದ ಹೊಟ್ಟೆಯ ನುಣುಪು, ಅವಳ ಕಿವಿಗೆ ಅರೆಬರೆಯಾಗಿ ಒಂದು ಮುತ್ತಿಟ್ಟೆನೋ ಇಲ್ಲವೋ ನಾನು ಅತೀವವಾಗಿ ಉದ್ವಿಗ್ನನಾಗಿ ಅದೇ ವೇಗದಲ್ಲಿ ನಿತ್ರಾಣನಾಗಿದ್ದೆ. ಕಾಲಕೆಳಗೆ ನೆಲವೇ ಕುಸಿದಂತೆ, ಅಲ್ಲ ನಾನೆಲ್ಲೋ ತೇಲುವಂತೆ... ಹಲ್ಲುಗಳನ್ನ ಕಟಕಟನೆ ಕಡಿಯಬೇಕೆನಿಸಿತ್ತು. ಚಂದ್ರಾ, ನನ್ನನ್ನು ತಳ್ಳಿಕೊಂಡು ಹೊರಟು ಹೋಗಿದ್ದಳು. ನಾನು ಅಮ್ಮ ಬರುವವರೆಗೂ ಅಲ್ಲೇ ಒಲೆಯ ಮುಂದೆ ಮಣೆಹಾಕಿ ಕುಳಿತೇ ಇದ್ದೆ... ಎದ್ದು ಬರುವಾಗ ಅವಳು ಬೀಳಿಸಿಹೋಗಿದ್ದ ಸಂಪಿಗೆಯ ದಂಡೆ ಕೈಗೆ ಸಿಕ್ಕಿತ್ತು. ಎತ್ತಿ ಜೋಪಾನ ಮಾಡಿದವನಿಗೆ ಅವತ್ತಿನಿಂದ ನಿತ್ಯವೂ ಕನಸಿನಲ್ಲಿ ಚಂದ್ರಾ... ಚಂದ್ರಾ.



ಅವತ್ತಿನಿಂದ ಚಂದ್ರಾಳಿಗಾಗಿ ನಾನು ಕಾತರಿಸತೊಡಗಿದೆ. ಮೊದಲೆಲ್ಲ ನಸೆನಸೆ ಮಾಡಿದ ಹುಡುಗಿ ಕಡೆಗೆ ನನ್ನ ನಿರೀಕ್ಷೆಯನ್ನೂ ಮೀರಿ ಒಲಿದು ಬಂದಿದ್ದಳು. ಅವಳಿದನ್ನು ಯಾರಿಗಾದರೂ ಹೇಳಿಬಿಟ್ಟರೆ ಅನ್ನುವ ಭಯ ಕಾಡದಂತೆ ಕಾದಳು. ಅವಳ ಸಾಹಚರ್ಯದಲ್ಲಿ ನಾನು ಕಾಳಿದಾಸನೇ ಆದೆ. ತೀರ ಈಚಿನವರೆಗೂ ಇದು ಯಾರಿಗೂ ಗೊತ್ತಿಲ್ಲವೆಂದೇ ತಾನು ತಿಳಿದಿದ್ದೆ. ಆದರೆ ವಾರಿಜಳಿಗೆ ತಿಳಿದಿತ್ತು. ಚಂದ್ರಾಳನ್ನು ಮರಳಿ ಕೆಲಸಕ್ಕೆ ಕರೆತಂದವಳು 'ಇಲ್ಲಿ ನೋಡು, ಅವತ್ತು ಆಗಿದ್ದೆಲ್ಲ ಆಗೋಯ್ತು, ಈಗ ಚಂದ್ರಾ ಬಹಳ